**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಸಿ.ಸಿ. ನಂ. 685/21**

**ಸಿ.ಡಬ್ಲ್ಯೂ-5 ಪಿ.ಡಬ್ಲ್ಯೂ- 1**

| | | |
|---|---|---|
| ಸಾಕ್ಷಿದಾರರ ಹೆಸರು | : | ಪರಮೇಶ |
| ತಂದೆಯ/ ಗಂಡನ ಹೆಸರು | : | ಕೆಂಪಯ್ಯ |
| ವಯಸ್ಸು | : | 42 ವರ್ಷ |
| ಉದ್ಯೋಗ | : | DCF |
| ವಾಸ ಸ್ಥಳ | : | ಮೈಸೂರು |

**ದಿನಾಂಕ 19.09.2025 ರಂದು ಸಾಕ್ಷಿಗೆ ಪ್ರಮಾಣ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ:- ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನಾನು 2009 ರಿಂದ 2012 ರವರೆಗೆ RFO ಐನೂರು ಮಾರಿಗುಡಿ ವಲಯದಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 08.10.2012 ರಂದು ಸಂಜೆ 6 ಗಂಟೆ ಸಮಯಕ್ಕೆ ನಮ್ಮ ಸಿಬ್ಬಂದಿ ಗಸ್ತು ಮಾಡುತ್ತಿರುವಾಗ 14 ಜನರ ತಂಡ ಕೇರಳ ಗಡಿಯಲ್ಲಿ ಇರುವ ಕಲ್ಲರೆ ಕೊಳಚಿ ಎಂಬ ಜಾಗದಲ್ಲಿ ಓಡಾಡುತ್ತಿದ್ದು, ನಮ್ಮ ಸಿಬ್ಬಂದಿ ಅವರನ್ನು ಸುತ್ತುವರೆದು ಕೇಳಲಾಗಿ ಅರಣ್ಯ ಪ್ರದೇಶಕ್ಕೆ ಕಾನೂನು ಬಾರ್ಹಿರವಾಗಿ ಪ್ರವೇಶಿಸಿ ಪಾಚಿ ಸಂಗ್ರಹ ಮಾಡಲು ಬಂದಿರುತ್ತೇವೆ ಎಂದು ತಿಳಿಸಿರುತ್ತಾರೆ. ನಂತರ ಅವರ ಬಳಿ ಇದ್ದ 10 ಚೀಲದಷ್ಟ ಪಾಚಿ ಅಮಾನತ್ತುಪಡಿಸಿಕೊಂಡಿರುತ್ತೇವೆ. ಅವರ ಬಳಿ ಅಡುಗೆ ಮಾಡಿಕೊಳ್ಳಲು ಪಾತ್ರೆಗಳು, ಆಹಾರ ಸಾಮಗ್ರಿಗಳು, ಕತ್ತಿಗಳು, ಖಾಲಿ ಚೀಲಗಳು ಮತ್ತು ತುಂಬಿದ

ಚೀಲಗಳು ಇದ್ದವು. ಸಂಜೆ 5 ರಿಂದ 7 ಗಂಟೆ ವರೆಗೂ ಮಹಜರ ಕ್ರಮ ಜರುಗಿಸಿ ಸದರಿ ಚೀಲಗಳನ್ನು ಅಮಾನತ್ತುಪಡಿಸಿಕೊಂಡಿರುತ್ತೇವೆ. ಸದರಿ ಸಮಯದಲ್ಲಿ ಚಾಸಾ 2 ಮತ್ತು 4 ರವರು ಹಾಜರಿದ್ದು ಚಾಸಾ 2 ರವರು ಮಹಜರ ಬರೆದಿರುತ್ತಾರೆ. ಮಹಜರನಲ್ಲಿ ಇರುವ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಮಹಜರನ್ನು ನಿಪಿ 1, ಸಾಕ್ಷಿ ಸಹಿ ನಿಪಿ 1 ಎ ಎಂದು ಗುರುತಿಸಲಾಯಿತು. ನಂತರ ಆರೋಪಿತರ ವಿರುದ್ದ ದೂರು ದಾಖಲಿಸಿ ಹೇಳಿಕೆ ಕೊಟ್ಟಿರುತ್ತೇನೆ. FIR ನಲ್ಲಿ ಇರುವ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ FIR ನ್ನು ಸಹಿಯನ್ನು ನಿಪಿ 2, ಸಾಕ್ಷಿ ಸಹಿಯನ್ನು ನಿಪಿ 2 ಎ ಎಂದು ಗುರುತಿಸಲಾಯಿತು. ಅಮಾನತ್ತುಪಡಿಸಿಕೊಂಡ ತುಂಬಿದ ಚೀಲಗಳಿರುವ ಪೋಟೋವನ್ನು ನೋಡಿ ಗುರುತಿಸಿದ್ದು ಸದರಿ ಪೋಟೋ ನಿಪಿ 3 ಮತ್ತು ಒಂದು ಸಿಡಿ ಯನ್ನು ನಿಪಿ 4 ಎಂದು ಗುರುತಿಸಲಾಯಿತು. ನಂತರ ಆರೋಪಿ ವಿರುದ್ದ ಖಾಸಗಿ ದೂರು ಸಲ್ಲಿಸಿರುತ್ತೇನೆ. ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**<u>ಮರು ವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು).

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ. ದಂಡಾಧಿಕಾರಿಗಳು, ಹೆಚ್.ಡಿ.ಕೋಟೆ.**